## ದೃಶ್ಯ ಭಾಷೆ ಗೊತ್ತಿಲ್ಲ..!

ಕೇಳುವ, ಓದುವ ಮತ್ತು ನೋಡುವ ಮಾಧ್ಯಮಗಳಿಗೆ ಅನುಗುಣವಾಗಿ ಭಾಷೆ ಇರುತ್ತದೆ. 'ಸಾವಿರ ಪದಗಳಲ್ಲಿ ಹೇಳಲಾಗದ್ದನ್ನು ಒಂದು ಚಿತ್ರ ಹೇಳುತ್ತದೆ' ಎನ್ನುವ ಮಾತಿದೆ. ಆದರೆ ನಮ್ಮ ಟಿ.ವಿ. ವಾಹಿನಿಗಳ ಉದ್ಯೋಗಿಗಳಿಗೆ ಇದರ ಅರಿವೇ ಇದ್ದಂತಿಲ್ಲ. ವಾರ್ತೆ, ವರದಿ ಯಾವುದೇ ಇರಲಿ, ತೋರಿಸಿದ ದೃಶ್ಯದ ತುಣುಕುಗಳನ್ನೇ ಮತ್ತೆ ಮತ್ತೆ ತೋರಿಸುತ್ತ, ಹೇಳಿದ್ದನ್ನೇ ಪುನಃ ಪುನಃ ಹೇಳುತ್ತ ಇರುವುದು ಮಾಮೂಲಿಯಾಗಿದೆ. ಹೀಗಾಗಿ ಒಂದು ತಾಸು ವಾಹಿನಿಗಳ ಸುದ್ದಿ ಕೇಳಿದರೂ ಒಂದಕ್ಕಿಂತ ಹೆಚ್ಚು ವಿಚಾರ ತಿಳಿಯಲು ಸಾಧ್ಯವಿಲ್ಲ. ಸುದ್ದಿ ಓದುವ ವಿಧಾನವಂತೂ ಹರಾಜು ಮಾರುಕಟ್ಟೆಯಲ್ಲಿ ಲಿಲಾವು ಹಾಕುವವರ ಧಾಟಿಯಲ್ಲೇ ತಾರಕ ಸ್ವರದಲ್ಲಿರುತ್ತದೆ: ಕರ್ಕಶವಾಗಿರುತ್ತದೆ. ಇಷ್ಟೇ ಸಮಯವನ್ನು ರೇಡಿಯೋ ಕೇಳಲು, ಇಲ್ಲವೇ ಪತ್ರಿಕೆ ಓದಲು ವಿನಿಯೋಗಿಸಿದರೆ ಅದೆಷ್ಟೋ ಹೆಚ್ಚು ವಿಚಾರಗಳನ್ನು ಅರಿತುಕೊಳ್ಳಬಹುದು.

ವಾಹಿನಿಯ ನಿರೂಪಕರು ಮತ್ತು ವರದಿಗಾರರು ದೃಶ್ಯಮಾಧ್ಯಮದ ಭಾಷೆಯಲ್ಲಿ ಸಂವಹನ ನಡೆಸುವುದನ್ನು ಯಾವಾಗ ಕಲಿಯುವರೋ ತಿಳಿಯದು. ಅಲ್ಲಿಯವರೆಗೂ ದೃಶ್ಯ, ಶ್ರಾವ್ಯ, ವಾಚ್ಯ ಹೀಗೆ ಯಾವ ಮಾಧ್ಯಮದ್ದೂ ಅಲ್ಲದ ಸಂಕರವನ್ನೇ ಕೇಳುವ, ನೋಡುವ ನಮ್ಮ ಸ್ಥಿತಿ ತಪ್ಪದು!

—ಕೆ.ವಿ. ಮಂಜುನಾಥ್, ಸಾಗರ

## ಎಲ್ಲರೂ ಪೆದ್ದುಗಳೇ?

ಒಂದು ಧಾರಾವಾಹಿ. ಕೂಡು ಕುಟುಂಬದ ಕತೆ. ಆ ಮನೆಯಲ್ಲಿ ಇರುವ ಒಬ್ಬ ಹೆಂಗಸಿಗೆ ಉಳಿದ ಎಲ್ಲರ ಮೇಲೆ ಭಾರೀ ದ್ವೇಷ. ಅವಳ ಹಗೆ, ಮತ್ಸರ ಎಷ್ಟರಮಟ್ಟಿಗೆಂದರೆ ಮನೆಯವರ ಮೇಲೆ ಏನಾದರೂ ಪಿತೂರಿ ನಡೆಸುತ್ತಲೇ ಇರುತ್ತಾಳೆ. ಅವಳ ಅಸಲಿ ಉದ್ದೇಶವೇನು, ಅವಳಿಗೆ ಏನು ಬೇಕು ಎನ್ನುವುದು ಸ್ವತಃ ನಿರ್ದೇಶಕರಿಗೂ ಗೊತ್ತಿರಲಿಕ್ಕಿಲ್ಲ. ಇವಳ ಈ ಪಿತೂರಿ ಅದೇ ಮನೆಯಲ್ಲಿರುವ ಇನ್ನೊಬ್ಬಳಿಗೆ ಗೊತ್ತಾದರೂ ಅವಳು ಅದನ್ನು ಯಾರಿಗೂ ಹೇಳುವುದಿಲ್ಲ. ಈ ಆಧುನಿಕ ಯುಗದಲ್ಲೂ ಅವಳ ಪಿತೂರಿಯನ್ನು ಯಾರಿಂದಲೂ ಬಯಲು ಮಾಡಲಾಗುವುದಿಲ್ಲ. ಈ ಲೇಡಿ ವಿಲನ್ ಬಿಟ್ಟು ಮನೆಯಲ್ಲಿರುವ ಉಳಿದವರೆಲ್ಲಾ ಪೆದ್ದುಗಳೇ, ಮೂರ್ಖ ಶಿಖಾಮಣಿಗಳೇ. ಇದು ಯಾವ ಧಾರಾವಾಹಿಯ ಪಾತ್ರಗಳು ಅಂತ ಯೋಚಿಸುತ್ತಿದ್ದೀರಾ ? ಅಸಲಿಗೆ ಈ ರೀತಿಯ ಪಾತ್ರಗಳನ್ನು ಈಗ ಪ್ರಸಾರವಾಗುತ್ತಿರುವ ಎಲ್ಲಾ ಧಾರಾವಾಹಿಗಳಲ್ಲೂ ಕಾಣಬಹುದು. ಯಾವುದೇ ಧಾರಾವಾಹಿ ನೋಡಿದರೂ ಈ ರೀತಿಯ ಕತೆ ಮತ್ತು ಪಾತ್ರಗಳು ಇದ್ದೇ ಇರುತ್ತವೆ. ಇಂತಹ ಲೇಡಿ ವಿಲನ್ ಪಾತ್ರಗಳು ಹೆಣ್ಣಿಗೆ ಅವಮಾನ ಮಾಡಿದಂತಲ್ಲವೇ ?

ಅಕ್ಷತಾ ವೇಣು, ಬೆಂಗಳೂರು

## ವಾರದ ಪತ್ರ: ನಮ್ಮ ಕೈಯಲ್ಲೇ ಇದೆ ರಿಮೋಟ್ !

ವಿವಿಧ ಚಾನೆಲ್‌ಗಳಲ್ಲಿ ಬರುವ ಕಾರ್ಯಕ್ರಮಗಳ ಬಗ್ಗೆ ದೂರುಗಳು ಸಾಮಾನ್ಯವಾಗಿವೆ. ಕಾರ್ಯಕ್ರಮಗಳಲ್ಲಿ ಗುಣಮಟ್ಟ ಇಲ್ಲದಿದ್ದರೆ ಚಾನೆಲ್ ಬದಲಾಯಿಸುವ ಅಥವಾ ಟಿವಿ ಬಂದ್ ಮಾಡುವ ಆಯ್ಕೆ, ಅಧಿಕಾರ ನಮ್ಮಲ್ಲಿಯೇ ಇದೆ. ಇತ್ತೀಚಿನ ಬಹುತೇಕ ಚಾನೆಲ್‌ಗಳನ್ನು ನಡೆಸುತ್ತಿರುವುದು ಹಣ ಮಾಡಲಿಕ್ಕೇ (ಬ್ಯುಸಿನೆಸ್) ಹೊರತು ಸಮಾಜ ಉದ್ಧಾರಕ್ಕೆ ಅಲ್ಲ ಎಂಬುದು ನಮಗೆಲ್ಲ ತಿಳಿದಿರುವ ವಿಚಾರವೇ. ಇಂತಹ ಚಾನೆಲ್‌ಗಳಲ್ಲಿ ಉತ್ತಮ ಕಾರ್ಯಕ್ರಮಗಳು ಬರದಿದ್ದರೆ ದೂರದರ್ಶನ (ಚಂದನ) ನೋಡಬಹುದು. ಚಂದನದಲ್ಲಿ ಈಗಲೂ ಅತ್ಯುತ್ತಮ ಕಾರ್ಯಕ್ರಮಗಳು ಬರುತ್ತಿವೆ. ಅವುಗಳಿಗೆ ತಕ್ಕ ಟಿ ಆರ್ ಪಿ ಸಿಗದಿರುವುದರಿಂದಲೇ (ನಾವುಗಳು ಬಹುಸಂಖ್ಯೆಯಲ್ಲಿ ನೋಡದಿರುವುದರಿಂದ) ಇತರ ಚಾನೆಲ್‌ಗಳ ಹಾವಳಿ ಜಾಸ್ತಿ ಆಗಿರೋದು. ಹೇಗೆ ಉತ್ತಮ ಆಹಾರ ಸಿಕ್ಕರೂ ಜಂಕ್ ಫುಡ್ ಜಾಸ್ತಿ ತಿನ್ನುವ ಸಂಸ್ಕೃತಿ ಬೆಳೆಸಿಕೊಳ್ಳುತ್ತಿದ್ದಾರೋ ಹಾಗೆಯೇ ಜಂಕ್ ಕಾರ್ಯಕ್ರಮ ನೋಡುವ ಸಂಸ್ಕೃತಿ ಬೆಳೆಸಿಕೊಂಡಿರುವುದು ನಾವೆಯೇ. ಮನಸ್ಸಿನ ನೆಮ್ಮದಿ, ಉತ್ತಮ ಸಂಸ್ಕೃತಿ ಕಾಪಾಡಿಕೊಳ್ಳುವ ಬಯಕೆಯಿದ್ದರೆ, ಕೆಟ್ಟ ಕಾರ್ಯಕ್ರಮಗಳಾದರೂ ಸರಿಯೇ ಶತಾಯ ಗತಾಯ ಟಿವಿ ನೋಡಲೇಬೇಕು ಎನ್ನುವ ಮನಃಸ್ಥಿತಿಯಿಂದ ಹೊರಬರಬೇಕಿದೆ.

ಅನಿಲ್ ಚನ್ನೇಗೌಡ, ಬೆಂಗಳೂರು

## ಒರಟು ಧಾರಾವಾಹಿ

ಸುವರ್ಣದ 'ಮಿಲನ' ಬಹಳ ಒರಟಾಗಿ ಮೂಡಿ ಬರುತ್ತಿದೆ. ಪ್ರಾರ್ಥನಾ ಹಾಗೂ ಸಮರ್ಥ್ ಈಗ ಗಂಡ– ಹೆಂಡತಿಯಾಗಿ ಬಾಳು ನಡೆಸುತ್ತಿರುವಾಗ ಐಶ್ವರ್ಯಳನ್ನು ಮಧ್ಯೆ ಸಿಲುಕಿಸಿಕೊಳ್ಳುತ್ತಿರುವುದು ಸರಿಯಲ್ಲ.

ಆಯಿಷಾ, ಉಜಿರೆ

## ದೂರದರ್ಶನ ಸಂಸ್ಕೃತಿಯ ಸಂಕೇತ

ಖಾಸಗಿ ವಾಹಿನಿಗಳು ಅಬ್ಬರದ ಪ್ರಚಾರದೊಂದಿಗೆ ಪದೇ ಪದೇ ತಿರುಚಿ ಮುರುಚಿ, ಶಬ್ದ, ಧಾಂ ಧೂಂ ಪ್ರಚಾರ ವೈಖರಿಯಿಂದ ದೂರದರ್ಶನ ವಾಹಿನಿಯನ್ನು ಮಂಕಾಗುವಂತೆ ಮಾಡಿವೆ. ಆದರೆ ದೂರದರ್ಶನದಲ್ಲಿ ಪ್ರಸಾರವಾಗುವ ಒಂದೊಂದು ಕಾರ್ಯಕ್ರಮಗಳೂ ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿದು, ಒತ್ತಿ ಹೇಳುತ್ತಿವೆ. ಸುದ್ದಿಯನ್ನು ತುಟಿಮೀರಿ ಪ್ರಸಾರ ಮಾಡುವುದಿಲ್ಲ. 'ಥಟ್ ಅಂತ ಹೇಳಿ' ಮೂರು ಸಾವಿರ ಕಂತುಗಳನ್ನು ದಾಟಿದೆ. 'ಸಂಗಾತಿ ಸಂಪ್ರೀತಿ' ದಾಂಪತ್ಯ ನೀತಿಯನ್ನು ಸಾರುತ್ತದೆ. 'ಮಧುರ ಮಧುರವೀ ಮಂಜುಳಗಾನ' ಇಡೀ ಕರ್ನಾಟಕವನ್ನೇ ಆಕರ್ಷಿಸಿದೆ. ಖಾಸಗಿ ವಾಹಿನಿಗಳು ರಾಜಕಾರಣಿಗಳಲ್ಲಿ ಜಗಳ ಹೊತ್ತಿಸಿ ಪದೇ ಪದೇ ಪ್ರಸಾರ ಮಾಡುತ್ತ, ಇಡೀ ವಾತಾವರಣವನ್ನೇ ಕಲ್ಮಷ ಮಾಡುವುದರ ಜೊತೆಗೆ ಯುವಕರಲ್ಲಿ ಸೇಡಿನ ಭಾವ ಬೆಳೆಸಲು ಕಾರಣವಾಗಿವೆ. ಕೆಟ್ಟ ಘಟನಾವಳಿಗಳನ್ನು ಬೆಳಗಿನಿಂದ ಸಂಜೆಯ ತನಕ ತೋರಿಸಿ ಕಿಚ್ಚೆಬ್ಬಿಸುತ್ತಿವೆ.

ದೂರದರ್ಶನ ಲಕ್ಷ್ಮಣ ರೇಖೆಯನ್ನು ದಾಟದೇ ತನ್ನ ಕಾರ್ಯವನ್ನು ಗೌರವಯುತವಾಗಿ ನಿರ್ವಹಿಸುತ್ತಿದೆ ಎಂಬುದಕ್ಕೆ ಸಂದೇಹವೇ ಇಲ್ಲ.

—ಲಲಿತಾ ಅಂಬಾಗಿಲು, ಉಪ್ಪುಂದ;
ಶಿಲಾ ಸತ್ಯೇಂದ್ರ, ಸ್ವಾಮಿ ಹರವೆ, ಚಾಮರಾಜನಗರ

## ಪಬ್ಲಿಕ್ ಹೀರೋ

ಸ್ವಾರ್ಥ, ದುರಾಸೆಗಳು ಎಲ್ಲೆ ಮೀರಿರುವ ಈ ದಿನಗಳಲ್ಲಿ, ಯಾವ ಹೆಸರು, ಬಿರುದುಗಳಿಗೂ ಆಸೆ ಪಡದೆ, ಸದ್ದಿಲ್ಲದೆ ತಮ್ಮ ಸುತ್ತ ಇರುವ ಕಷ್ಟಗಳಿಗೆ ಸ್ಪಂದಿಸಿ ನಿಸ್ವಾರ್ಥ ಸೇವೆ ಮಾಡುತ್ತಿರುವ ಮಹನೀಯರನ್ನು ಹುಡುಕಿ, ಗುರುತಿಸುವ ಕೆಲಸ ಮಾಡುತ್ತಿದೆ ಪಬ್ಲಿಕ್ ಟಿವಿ. 'ಪಬ್ಲಿಕ್ ಹೀರೋ' ಎಂಬ ಅಭಿದಾನ ನೀಡಿ, ಜನತೆಗೆ ಅವರನ್ನು ಪರಿಚಯಿಸುತ್ತಿರುವ ಪ್ರಯತ್ನ ಸ್ತುತ್ಯರ್ಹ. ಅಷ್ಟೇ ಅಲ್ಲದೆ ಇನ್ನೂ ಒಂದು ಹೆಜ್ಜೆ ಮುಂದುವರೆದು ತಮ್ಮಿಂದ ಯಾವ ರೀತಿಯಲ್ಲಿ ಸಹಾಯ ಮಾಡಲಾದೀತೋ ಅದನ್ನು ಮಾಡುತ್ತಿರುವ ಪಬ್ಲಿಕ್ ಟಿವಿಗೆ ಅಭಿನಂದನೆ.

—ಎಲ್. ಗಿರಿಜಾರಾಜ್, ಬೆಂಗಳೂರು

## ಪ್ರಶ್ನೆಗಳ ಸುರಿಮಳೆ

'ಸುವರ್ಣ'ದ 'ಗುಂಡ್ಯಾನ ಹೆಂಡ್ತಿ' ಈಗ ಹಲವು ಅನಿರೀಕ್ಷಿತ ತಿರುವುಗಳನ್ನು ಪಡೆದಿದೆ. ಹಿಂದಿನ ಕಥೆಗೂ, ಈಗಿನದಕ್ಕೂ ಸೂಕ್ಷ್ಮವಾಗಿ ಕೂಡಾ ಸಂಬಂಧ ಪ್ರಚುರಪಡಿಸದೆ ಹಲವು ಪ್ರಶ್ನೆಗಳು ಉದ್ಭವವಾಗಿವೆ.

—ಸುಂದರ್, ಬೆಂಗಳೂರು

## ಮನೆ ಕಟ್ಟಬೇಕು

'ಮೂರ್ಖರ ಪೆಟ್ಟಿಗೆ' ಎಂಬ ಟಿವಿ ಕೂಡಾ ಮನರಂಜನೆ ನೀಡುವುದು ಮಾತ್ರವಲ್ಲ, ಮೂಢನಂಬಿಕೆ, ಮಾಟ– ಮಂತ್ರ ಇತ್ಯಾದಿಗಳನ್ನು ಜನರ ಮನಸ್ಸಿನಿಂದ ದೂರ ಮಾಡುವ ಕೆಲಸ ಮಾಡಬೇಕು. ಇದಕ್ಕೆ ಧಾರಾವಾಹಿಗಳು ಮಾದರಿಯಾಗಬೇಕೇ ವಿನಃ ಮನೆಹಾಳುತನವನ್ನು ಬಿಂಬಿಸಬಾರದು. ಮಂದಿ ನೋಡಿ ಕಲಿಯುವುದು ಹೆಚ್ಚಾಗಿರುವ ಕಾರಣ ಧಾರಾವಾಹಿಗಳು ಮನೆ, ಮನಗಳನ್ನು ಒಂದು ಮಾಡುವಂತೆ ಇರಬೇಕು. 'ಪುಟ್ಟ ಗೌರಿ'ಯ ಧರ್ಮ ಸಾಗರಿ, 'ಕುಲವಧು'ವಿನ ವಚನ, ಅಜ್ಜಿ, ಹರಿಯ ಹೆಂಡತಿ, 'ಲಕ್ಷ್ಮೀ ಬಾರಮ್ಮ'ದ ಕುಮುದ, 'ಅಗ್ನಿ ಸಾಕ್ಷಿ'ಯ ಚಂದ್ರಿಕ ಕೆಲವು ಇದಕ್ಕೆ ಉದಾಹರಣೆಗಳು.

—ಪದ್ಮ ರಾಜೇಂದ್ರನ್, ರಾಜಾಜಿನಗರ

## ಮಳೆ ಮಾಹಿತಿ ಬೇಕು

ಟಿವಿ ವಾರ್ತೆ ಪ್ರಸಾರದ ನಂತರ ಹವಾಮಾನ ವರದಿ ಅಂತ ಕೆಲವು ಸ್ಥಳಗಳ ಉಷ್ಣಾಂಶದ ಮಾಹಿತಿ ಮಾತ್ರ ನೀಡುತ್ತಾರೆ. ಆದರೆ ಈ ಸಂದರ್ಭದಲ್ಲಿ ಮಳೆಯ ಮುನ್ಸೂಚನೆ ನೀಡುವುದು ಸಮಂಜಸವಲ್ಲವೇ? ಇದರಿಂದ ಸಾರ್ವಜನಿಕರಿಗೆ, ರೈತಾಪಿ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಅದು ಬಿಟ್ಟು ಕೇವಲ ಉಷ್ಣಾಂಶ ಮತ್ತು ಈಗಾಗಲೇ ಸುರಿದ ಮಳೆಯ ಪ್ರಮಾಣ ಹೇಳಿದರೆ ಸಾಕೇ?

